ಪಿ.ಡಬ್ಲ್ಯೂ ಃ **1 - ವಿಕಾಶ್ ಎಸ್.**

ಸಾಕ್ಷಿಗೆ ದಿನಾಂಕಃ **11.06.2026** ರಂದು ಪ್ರಮಾಣ ವಚನ ಬೋಧಿಸಲಾಯಿತು.

ಪಾಟೀ ಸವಾಲು**: 1** ನೇ ಎದುರುದಾರರ ಪರಃ ವಕೀಲರ ಮೂಲಕ ಃ

ನಾನು ಬಿ.ಕಾಂ. ವ್ಯಾಸಂಗ ಮುಗಿಸಿರುತ್ತೇನೆ. ನನಗೆ ಕನ್ನಡ ಓದಲು ಮತ್ತು ಬರೆಯಲು ಬರುತ್ತದೆ. ನನಗೆ ನನ್ನ ಅರ್ಜಿಯಲ್ಲಿ ಮತ್ತು ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರದಲ್ಲಿ ಇರುವ ಸಂಗತಿಗಳ ಬಗ್ಗೆ ಗೊತ್ತಿರುತ್ತದೆ. ನಾನು ಮಾಸಿಕ 20 ಸಾವಿರ ಆದಾಯ ಹೊಂದಿರುವ ಬಗ್ಗೆ ದಾಖಲೆಯನ್ನು ಹಾಜರುಪಡಿಸಿರುವುದಿಲ್ಲ. ನಾನು ಬಾಣಸಮುದ್ರದಿಂದ ಟಿ.ಕೆ.ಹಳ್ಳಿ ಗೇಟ್ ಕಡೆ ಆ ದಿನ ಹೋಗುತ್ತಿದ್ದೆ. ಆ ದಿನ ನಾನು ಮತ್ತು ನನ್ನ ಮಾವ ಕೆಎ-11-ಇಟಿ-8083 ನಂಬರ್‌ನ ಬೈಕ್‌ನಲ್ಲಿ ಹೋಗುತ್ತಿದ್ದೆವು. ನನಗೆ ಈಗ 21 ವರ್ಷ ವಯಸ್ಸಾಗಿರುತ್ತದೆ. ನಾನು ದ್ವಿಚಕ್ರ ವಾಹನವನ್ನು ಚಾಲನೆ ಮಾಡಲು ಚಾಲನಾ ಪರವಾನಿಗೆ ಹೊಂದಿದ್ದು, ಅದನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ. ನಾನು ನನ್ನ ವಕೀಲರಿಗೆ ಡಿ.ಎಲ್. ಕೊಟ್ಟಿದ್ದು, ಅದನ್ನು ಹಾಜರುಪಡಿಸಿರಬಹುದು.

2. ದಿ: 05.11.2023 ರಿಂದ 08.11.2023 ರವರೆಗೆ ನಾನು ಒಳರೋಗಿಯಾಗಿ ಚಿಕಿತ್ಸೆ ಪಡೆದಿರುತ್ತೇನೆ. ಆ ದಿನ ಬೈಕ್ ಚಾಲನೆ ಮಾಡುವಾಗ ನಾನು ಮತ್ತು ನನ್ನ ಮಾವ ಹೆಲ್ಮೆಟ್ ಧರಿಸಿರಲಿಲ್ಲ. ಅಪಘಾತವಾದ ದಿನದಂದೇ ನನ್ನ ಮಾವ ದೂರು ನೀಡಿರುತ್ತಾರೆ. ಮಳವಳ್ಳಿ ಸರ್ಕಾರಿ ಆಸ್ಪತ್ರೆಯಲ್ಲಿ ಪ್ರಥಮ ಚಿಕಿತ್ಸೆ ಪಡೆದುಕೊಂಡ ಬಗ್ಗೆ ದಾಖಲೆಯನ್ನು ಹಾಜರುಪಡಿಸಿರುವುದಿಲ್ಲ. ದಿ: 06.11.2023 ರಂದು ಅಪಘಾತವಾಗಿರುತ್ತದೆ. ದಿ: 05.11.2023 ರಿಂದ ನಾನು ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದಿರುವುದರಿಂದ ಅಪಘಾತವಾಗಿಲ್ಲ ಎಂದರೆ ದಿ: 06.11.2023 ರಂದು ಅಪಘಾತವಾಗಿರುತ್ತದೆ.

3. ನಿಪಿ 8 ರ ಬಿಲ್‌ಗಳಲ್ಲಿ 11 ನೇ ಬಿಲ್ಲನ್ನು ದಿ: 06.09.2023 ಕ್ಕೆ ಸಂಬಂಧಿಸಿದಂತೆ ಹಾಜರುಪಡಿಸಿರುತ್ತೇನೆ ಎಂದರೆ ಸರಿ. ಬಿಲ್ ನಂಬರ್ 9 ರಲ್ಲಿ ದಿನಾಂಕವನ್ನು ತಿದ್ದಿರುತ್ತೇವೆ ಎಂದರೆ ಸರಿಯಲ್ಲ. ನಾನು ಹಾಜರುಪಡಿಸಿರುವ ಒಟ್ಟು ಮೆಡಿಕಲ್ ಬಿಲ್ಲುಗಳ ಮೊತ್ತ 89,271 ರೂಪಾಯಿ ಇರುತ್ತದೆ ಎಂದರೆ ಸರಿ. ಅಪಘಾತವು ಆದ ದಿನದಂದೇ ದೂರು ಕೊಡಲು ನಮಗೆ ತೊಂದರೆ ಇರಲಿಲ್ಲ. ಅಪಘಾತಕ್ಕೂ ನನಗೂ ಯಾವುದೇ ಸಂಬಂಧವಿಲ್ಲದೇ ಇದ್ದರೂ ದಿ: 05.11.2023 ರಂದು ಬಿದ್ದು ಅಪಘಾತವಾಗಿದೆ ಎಂದು 02 ದಿನಗಳ ನಂತರ ಸುಳ್ಳು ದೂರನ್ನು ಸೃಷ್ಟಿ ಮಾಡಿರುತ್ತೇನೆ ಎಂದರೆ ಸರಿಯಲ್ಲ. ಸುಳ್ಳು ದಾಖಲೆಗಳನ್ನು ಸೃಷ್ಟಿ ಮಾಡಲು 02

ದಿನಗಳ ವಿಳಂಬ ಮಾಡಿರುತ್ತೇವೆ ಎಂದರೆ ಸರಿಯಲ್ಲ. ಅಪಘಾತವಾದ ದಿನಕ್ಕೂ ನಿಪಿ 8 ಕ್ಕೂ ಯಾವದೇ ಸಂಬಂಧವಿಲ್ಲ ಎಂದರೆ ಸರಿಯಲ್ಲ.

4. ನಾನು ಆಸ್ಪತ್ರೆಯಿಂದ ಬಿಡುಗಡೆಯಾದಾಗ ನಾನು ಸಂಪೂರ್ಣವಾಗಿ ಗುಣಮುಖವಾಗಿದ್ದೆ ಎಂದು ವೈದ್ಯರು ನಿಪಿ 7 ರಲ್ಲಿ ಹೇಳಿರುತ್ತಾರೆ ಎಂದರೆ ಸರಿಯಲ್ಲ. ನಾನು ಪರಿಹಾರ ಪಡೆಯುವ ದುರುದ್ದೇಶದಿಂದ ಎದುರುದಾರರ ವಿರುದ್ಧ ಸುಳ್ಳು ಅರ್ಜಿಯನ್ನು ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ನನಗೂ ಮತ್ತು ನಾನು ಹೇಳುವ ಅಪಘಾತಕ್ಕೂ ಯಾವುದೇ ಸಂಬಂಧವಿಲ್ಲ ಎಂದರೆ ಸರಿಯಲ್ಲ. ನನ್ನ ಅಜಗರೂಕತೆಯಿಂದ ನಾನೇ ರಸ್ತೆಯಲ್ಲಿ ಬಿದ್ದು ಗಾಯ ಮಾಡಿಕೊಂಡಿದ್ದು, ದಾಖಲೆಗಳ ಕೊರತೆಯಿಂದ ವಿಳಂಬವಾಗಿ ದೂರು ನೀಡಿರುತ್ತೇನೆ ಎಂದರೆ ಸರಿಯಲ್ಲ.

ಮರುವಿಚಾರಣೆ ಇಲ್ಲ.

ಸಾಕ್ಷಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು.

ಓ ಹೇ ಕೇ ಸ ಇದೆ

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಎಂ.ಎ.ಸಿ.ಟಿ. ಮಳವಳ್ಳಿ.